**ಮೈಸೂರಿನ ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ**

**ಎಸ್.ಸಿ.ನಂ.08/2025**

ಪಿರ್ಯಾದುದಾರರು : ವಿಜಯನಗರ ಪೋಲೀಸ್ ಠಾಣೆ

ಮತ್ತು

ಆರೋಪಿ : ರಾಮಪ್ರಸಾದ್ ಕುಮಾರ್

**ದೋಷಾರೋಪಣೆ**

ನಾನು **ಶ್ರೀ ಮಲ್ಲನಗೌಡ, 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು,** ಈ ಕೆಳಕಂಡ ಆರೋಪಿಯಾದ :-

ರಾಮಪ್ರಸಾದ್ ಕುಮಾರ್ .ಡಿ ಬಿನ್
ದೊರೆಸ್ವಾಮಿ, 34 ವರ್ಷ , ವಾಸ.
ಕೆ/ಆಫ್ ರಾಮಚಂದ್ರರವರ ಮನೆ,
1 ನೇ ಕ್ರಾಸ್, ಅಭಿಷೇಕ್ ಸರ್ಕಲ್ ಬಳಿ,
ಹೆಬ್ಬಾಳ್, ಮೈಸೂರು.

ಆರೋಪಿಯಾದ ನೀವು ಕಾನೂನು ಬಾಹಿರವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಮೈಸೂರು ನಗರ, ವಿಜಯನಗರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚಾಸಾ-19 ರವರ ಮಾಲೀಕತ್ವದ ಹೆಬ್ಬಾಳ್ 1 ನೇ ಹಂತದ ಅಭಿಷೇಕ್ ಸರ್ಕಲ್ ಬಳಿಯ 1 ನೇ ಕ್ರಾಸ್‌ನಲ್ಲಿರುವ ಬಿಲ್ಡಿಂಗ್ ನಂ.237/3 ರ 1 ನೇ ಮಹಡಿಯ ಕಟ್ಟಡವನ್ನು ಬಾಡಿಗೆಗೆ ಪಡೆದುಕೊಂಡು ವೇಶ್ಯಾ ವೃತ್ತಿಯನ್ನು ನಡೆಸುವ ಉದ್ದೇಶದಿಂದ ರಾಯಲ್ ಸ್ಪಾ ಅಂಡ್ ಬ್ಯೂಟಿ ಪಾರ್ಲರನ್ನು ತೆರೆದು ಆರೋಪಿಯಾದ ನೀವು ಚಾಸಾ-11 ರಿಂದ 16 ರವರಿಗೆ ಕೆಲಸ ಕೊಡಿಸುವುದಾಗಿ ನಂಬಿಸಿ ಕರೆದುಕೊಂಡು ಬಂದು, ಅವರಿಗೆ ಹಣದ ಆಮಿಷ ತೋರಿಸಿ ವೇಶ್ಯಾವಾಟಿಕೆಗೆ ನೇಮಿಸಿಕೊಂಡು, ಗಿರಾಕಿಗಳನ್ನು ಕರೆಸಿ ಅವರೊಂದಿಗೆ ಲೈಂಗಿಕ

ಕ್ರಿಯಯಲ್ಲಿ ತೊಡಗಿಸಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ದಿಃ 25.05.2024 ರಂದು ಚಾ.ಸಾ.17 ಮತ್ತು 18 ರವರನ್ನು ರಾಯಲ್ ಇಷಾ ಸ್ಪಾ ಅಂಡ್ ಬ್ಯೂಟಿಪಾರ್ಲರ್ ಗೆ ಕರೆಯಿಸಿ ವೇಶ್ಯಾವಾಟಿಕೆಯಲ್ಲಿ ತೊಡಗಿಸಿದ್ದು, ಆರೋಪಿಯಾದ ನೀವು ಕಾನೂನು ಬಾಹಿರವಾಗಿ ಹಣ ಸಂಪಾದನೆ ಮಾಡುವ ಸಮಾನ ಉದ್ದೇಶದಿಂದ ನೊಂದ ಚಾ.ಸಾ–11 ರಿಂದ 16 ರವರನ್ನು ಮಾನವ ಕಳ್ಳ ಸಾಗಾಣಿಕೆ ಮಾಡಿ ವೇಶ್ಯಾವಾಟಿಕೆಗೆ ನೇಮಿಸಿಕೊಂಡು ಹಾಗೂ ವೇಶ್ಯಾವಾಟಿಕೆಯಲ್ಲಿ ತೊಡಗಿಸಿ ಹಣ ಸಂಪಾದನೆ ಮಾಡುತ್ತಿದ್ದು, ಆ ಕಾರಣದಿಂದ ಆರೋಪಿಯಾದ ನೀವು ಕಲಂ.3(1), 4, 5 **of Immoral Traffic Prevention Act**,1956 **ಹಾಗೂ ಭಾ.ದಂ.ಸಂ.ಕಲಂ**.370(2) ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಮೇಲ್ಕಂಡ ಆರೋಪದಡಿ ಆರೋಪಿಯಾದ ನೀವು ನನ್ನಿಂದ ಈ ದಿನ ದಿನಾಂಕ **14.07.2026** ರಂದು ಅಧಿವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಮಲ್ಲನಗೌಡ)**
**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು**